ಶ್ರೀ ಟಿ ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಭಸ್ಯರು ಅಭಿಪ್ರಾಯ ಪಟ್ಟಂತೆ ಆ ಕೆಲಸ ಮಂದಗತಿಯಲ್ಲಿ ಸಾಗುತ್ತಿದೆ. ಇದಕ್ಕೆ ಎರಡು ಪ್ರಮುಖ ಕಾರಣಗಳಿವೆ. ಈ ಕೆಲಸವನ್ನು ಮಾಡಿಸುತ್ತಿದ್ದ ಕಂಟ್ರಾಕ್ಟರ್ ಏನಿದ್ದರು, ಅವರು ಸತ್ತು ಹೋಗಿರುವ ವಿಷಯ ಮಾನ್ಯ ಸದಸ್ಯರಿಗೂ ಗೊತ್ತಿದೆ. ಅವರ ಮೇಲೆ ಇನ್ನೊಬ್ಬ ಕಂಟ್ರಾಕ್ಟರ್‌ಗೆ ಆ ಕೆಲಸವನ್ನು ವಹಿಸಿ ಅವರು ಅರ್ಧಕ್ಕೆ ಮೇಲೆಗೆ ಕೆಲಸ ಮಾಡಬೇಕೆಂದು ನಿರ್ದಿಷ್ಟವಾಗಿ ಸೂಚನೆ ಕೊಡಲಾಗಿದೆ. ಇನ್ನೂ ಬಹುಮುಖ್ಯವಾದ ಕಾರಣ ಎಂದರೆ, ಈ ಕಾಮಗಾರಿ ನಡೆಯುವ ಸ್ಥಳ ಏನಿದೆ. ಅದು ಒಂದು ದೇವಸ್ಥಾನಕ್ಕೆ ಸೇರಿರುವುದರಿಂದ ಆ ದೇವಸ್ಥಾನದ ಆಡಳಿತ ಮಂಡಳಿಯವರು ಅಡ್ಡಿ ಆಡಚಣೆ ಉಂಟುಮಾಡಿದ್ದರಿಂದ ಆ ಕೆಲಸ ಮಂದ ಗತಿಯಲ್ಲಿ ಸಾಗುವಂತಾಯಿತು. ಈಗ ಕೆಲಸವನ್ನು ಚುರುಕುಗೊಳಿಸುವುದಕ್ಕೆ ಸರ್ಕಾರ ಎಲ್ಲಾ ಕ್ರಮ ಕೈಗೊಂಡಿದೆಯೆಂದು ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಬಿ. ಎಸ . ಜವ್ವಾಣ್.—ಈ ಕೆಲಸವನ್ನು ಬಹಳ ವೇಗವಾಗಿ ಮಾಡಿ ಮುಗಿಸುವುದಕ್ಕೆ ಕಂಟ್ರಾಕ್ಟರ್‌ಗಳಿಗೆ ಸೂಚನೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎನ್. ನರಸಿಂಹಮೂರ್ತಿ.—ಆ ಸಲಹೆಯನ್ನು ಒಪ್ಪಿಕೊಳ್ಳಲಾಗಿದೆ.

ಮೂಡಬಿದ್ರೆ ಪಟ್ಟಣಕ್ಕೆ ಕಂಡಿಯಂವ ನೀರಿನ ಕೊರತೆ

೧೩೯೮. ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;—

(೧) ಮೂಡಬಿದ್ರೆ ಪುರಸಭೆಯ ವ್ಯಾಪ್ತಿಯಲ್ಲಿ ನೀರಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(೨) ಹಾಗಿದ್ದಲ್ಲಿ ಜ್ಯೋತಿ ನಗರದಲ್ಲಿ ನೀರಿನ ಟ್ಯಾಂಕ್ ನಿರ್ಮಿಸಲು ಸದರಿ ಪುರಸಭೆಯವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ರೂ. ೩.೭೨ ಲಕ್ಷ ವಂತಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಯಾವಾಗ ?

(೩) ಈವರೆವಿಗೂ ಈ ಕೆಲಸವನ್ನು ಪ್ರಾರಂಭಿಸದಿರಲು ಕಾರಣವೇನು ?

(೪) ಜೈನ ಕಾಶಿಯೆಂದು ಹೆಸರಾಗಿರುವ ಈ ಪಟ್ಟಣದ ಕುಡಿಯುವ ನೀರಿನ ಯೋಜನೆಯನ್ನು ಕೂಡಲೇ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(೧) ಬಂದಿದೆ.

(೨) ಮೂಡಬಿದ್ರೆ ಪುರಸಭೆಯವರು ಆವರ ವತಿಯಿಂದ ಈ ಕಾಮಗಾರಿಗೆ ೩.೨,೦೦೦–೦೦ ರೂ.ಗಳನ್ನು ಪಾವತಿ ಮಾಡಿದ್ದಾರೆ, ಸರ್ಕಾರವು ಪುರಸಭೆಗೆ ನೀರಂ ಸರಬರಾಜು ಅಭಿವೃದ್ಧಿಗಾಗಿ ಮಾರ್ಚಿ ೧೯೯೦ರಲ್ಲಿ ಮಂಜೂರಾದ ೯೩.೦೫ ಲಕ್ಷ ರೂಪಾಯಿಗಳ ಅನುದಾನ ಪೈಕಿ ಈ ಕಾಮಗಾರಿಗೆ ಒಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿರುತ್ತದೆ, ಒಟ್ಟು ಠೇವಣಿಯಲ್ಲಿ ರೂ. ೧.೩೨ ಲಕ್ಷ ಗಳು ಆಗಿರುತ್ತದೆ.

(೩) ಪುರಸಭೆಯವರು ಈ ಕಾಮಗಾರಿಗೆ ೩.೭೫ ಲಕ್ಷ ರೂಪಾಯಿಗಳ ಪ್ರತಿಯಾಗಿ ೧.೩೨ ಲಕ್ಷ ರೂಪಾಯಿಗಳನ್ನು ಮಾತ್ರ ಪಾವತಿ ಮಾಡಿರುವುದರಿಂದ ಈ ಕೆಲಸ ಪ್ರಾರಂಭಿಸಿರುವುದಿಲ್ಲ.

(೪) ಆದಾಗ್ಯೂ ಜ್ಯೋತಿ ನಗರದಲ್ಲಿ ಜಲಸಂಗ್ರಹಾಗಾರ ಕೆಲಸವನ್ನು ಕೈಗೊಂಡು ಮುಗಿಸಲಾಗುವುದು,

ಶ್ರೀ ಕೆ. ಸೋಮಪ್ಪ ಸುವರ್ಣ .—ಮಾನ್ಯ ಅಧ್ಯಕ್ಷರೆ, ಮೂಡುಬಿದರೆಯು ಇಂದು ಭಾರತದಲ್ಲಿ ಜೈನಕಾಶಿ ಎಂದು ಹೆಸರನ್ನು ಪಡೆದಿದೆ. ಆದರೆ ಇಂದು ಅಲ್ಲಿಗೆ ಬರುವ ಸಾವಿರಾರು ಯಾತ್ರಿಕರಿಗೆ ನೀರಿನ ಕೊರತೆ ಇರುವುದರಿಂದ ಅಲ್ಲಿಗೆ ಬರುವ ಯಾತ್ರಿಕರು ಆಲೋಚಿಸುವ ಪ್ರಮೇಯ ಬಂದೊದಗಿದೆ. ೧.೩೨ ಲಕ್ಷ ರೂಪಾಯಿಗಳನ್ನು ಅಲ್ಲಿಯ ಪುರಸಭೆಯವರು ಕಟ್ಟಿದ್ದಾರೆ. ಈ ಬಾರಿ ೧೯೯೦ರಲ್ಲಿ ಪ್ರತಿಯೊಂದು ಪುರಸಭೆಗೂ ೧.೫೦ ಲಕ್ಷ ರೂಪಾಯಿಗಳನ್ನು ಸ್ಟೇಟ್ಸಿಟಿ ಆಫ್ ವಾಟರ್ ಸ್ಕೀಮ್‌ನಲ್ಲಿ ಕೊಟ್ಟಿದ್ದೀರಿ. ಆದರೆ ಮೂಡುಬಿದಿರೆಗೆ ಈ ಪಟ್ಟಿಯಲ್ಲಿ ೧.೫೦ ಲಕ್ಷ ರೂಪಾಯಿಗಳು ಸಿಕ್ಕಿಲ್ಲಿಲ್ಲ.

ತಾವುಗಳು ಕೊಡಲಿರುವ ೧.೫೦ ಲಕ್ಷ ರೂಪಾಯಿಗಳನ್ನು ಈ ಟ್ಯಾಂಕ್‌ಗಾಗಿ ಉಪಯೋಗಿಸಿ ಕೆಲಸವನ್ನು ಪ್ರಾರಂಭಪಾಡಿ ಜನರಿಗೆ ನೀರು ಒದಗಿಸಬಹುದು ಎಂದು ನಾವು ಯೋಚಿಸಿದ್ದೆವು. ಆದರೆ ಯಾವ ಕೆಲಸವೂ ಪ್ರಾರಂಭವಾಗಲಿಲ್ಲ. ಯಾತ್ರಿಕರು ಬರುವಂಥ ಸ್ಥಳವಾದುದರಿಂದ ಈ ಕೆಲಸವಾಗುವ ಅವಶ್ಯಕತೆ ಇದೆ. ತಾವುಗಳು ಏನೋ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಆ ಜ್ಯೋತಿನಗರದಲ್ಲಿ ನೀರಿನ ಟ್ಯಾಂಕ್ ಕೂಡಲೇ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದುದರಿಂದ ತಾವುಗಳು ಮಾಡುವ ಕೆಲಸ ಬೇಗನೇ ಆಗುತ್ತದೋ ಎಂಬ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರು ಹೇಳಿದ ಹಾಗೆ ಅದು ಒಂದು ಐತಿಹಾಸಿಕ ಪ್ರಸಿದ್ಧವಾದಂಥ ಸ್ಥಳವಾಗಿದೆ, ಪ್ರಮುಖ ಯಾತ್ರಿಕ ಕ್ಷೇತ್ರವಾಗಿದೆ. ಒಳಗೆ ಮಂದಿ ಈ ಧಾರ್ಮಿಕ ಕ್ಷೇತ್ರಕ್ಕೆ ಬರುತ್ತಾರೆ. ೧೯೬೯-೭೦ರ ಬಾರ್ಜ್ ತಿಂಗಳಲ್ಲಿ ಕೆಲವು ಪುರಸಭೆಗಳಿಗೆ ಅನುದಾನವನ್ನು ಕೊಡತಕ್ಕಂಥ ಕಾಲದಲ್ಲಿ ಈ ಪುರಸಭೆಗೂ ಮಂಜೂರಾತಿ ಕೊಟ್ಟಿದ್ದೇವೆ. ಅದು ಜಾರಿಗೆ ಆಗದಿದ್ದರೆ ಜಾರಿ ಆಗುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅಧ್ಯಕ್ಷತೆ ಮೇರೆಗೆ ಮಂಡುಬಿದರೆಗೆ ಇತರ ಪುರಸಭೆಗಳಿಗಿಂತಲೂ ಹೆಚ್ಚು ಆದ್ಯತೆಯನ್ನು ಕೊಟ್ಟು, ತಮ್ಮ ಕಳಕಳಿಯನ್ನು ಅರ್ಥಮಾಡಿಕೊಂಡು ಈ ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ.—ನಾನು ಹೇಳುವಂಥ ೩.೭೫ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಈ ಕೆಲಸ ಪ್ರಾರಂಭಿಸುತ್ತೇವೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ೧.೩೨ ಲಕ್ಷದಷ್ಟು ಹಣವನ್ನು ನಾವು ೧೯೬೯ರಲ್ಲಿ ಕಟ್ಟಿದ್ದೇವೆ. ನಮಗೆ ಈ ಸಲ ಸಿಗುವಂಥ ಗ್ರ್ಯಾಂಟ್‌ನಲ್ಲಿ ೧.೫೦ ಲಕ್ಷ ರೂಪಾಯಿಗಳನ್ನು ನಾವು ಇನ್ನೂ ಪಡೆಯಲಿಲ್ಲ. ಬಹುಶ: ನನಗೆ ಕಾರಣವದು ಏನೆಂದರೆ, ಕಾರ್ಕಳದಲ್ಲಿ ಮಹಾಮಸ್ತಕಾಭಿಷೇಕ ಆಗುವಾಗ ರಸ್ತೆಗಳ ರಿಪೇರಿಗಾಗಿ ಮತ್ತು ಅಲ್ಲಿ ನೀರಿನ ಅನುಕೂಲತೆ ಬೇಕು ಎಂದು ಮಾನ್ಯ ಪಂಚಿಮಂತ್ರಿಗಳು ನಮಗೆ ೩ ಲಕ್ಷ ರೂಪಾಯಿಗಳ ಗ್ರ್ಯಾಂಟ್‌ಕೊಟ್ಟ ಕಾರಣದಿಂದ ಈ ಹಣವನ್ನು ನಮಗೆ ಕೊಡದೇ ಇದ್ದಿರೋ ? ಅಥವಾ ಈ ೧.೫೦ ಲಕ್ಷ ರೂ. ವನ್ನು ಸಹ ನೀರು ಸರಬರಾಜು ಬಗ್ಗೆ ಸೇರಿಸಿಕೊಂಡಿದ್ದೀರೋ ಎಂಬುದನ್ನು ತಿಳಿಸಬೇಕು. ಏನಿದ್ದರೂ ಸಹ ೧೯೭೦ರೊಳಗೆ ಈ ಕೆಲಸ ಪ್ರಾರಂಭಿಸಬೇಕು. ಜೈನರು ರಾತ್ರಿಯಲ್ಲಿ ಊಟ ಮಾಡುವುದಿಲ್ಲ. ಅವರು ಅಹಿಂಸಾವಾದಿಗಳು. ಇವೊತ್ತು ಜೈನರ ಪೇಟೆಯಲ್ಲಿ ನೀರು ಇಲ್ಲದೆ ರಾತ್ರಿ ೧೨ ಗಂಟೆ ಬಳಿಕ ಕೊಡ ಹಿಡಿದುಕೊಂಡು ಅವರು ನೀರಿಗಾಗಿ ಕಾಯುವ ಪ್ರಮೇಯ ಬಂದಿದೆ. ಆದುದರಿಂದ ಈ ಪವಿತ್ರವಾದ ಸ್ಥಳದ ಪಾವಿತ್ರ್ಯತೆ ಉಳಿಸಲಿಕ್ಕೆ, ತಾವುಗಳು ಕೂಡಲೆ ಕ್ರಮ ಕೈಗೊಂಡು ೧೯೭೦ ರೊಳಗೆ ಅಲ್ಲಿಯ ಜನರಿಗೆ ನೀರು ಸಿಗುವಂಥ ಸವಲತ್ತನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರ ಎಲ್ಲಾ ಅಭಿಪ್ರಾಯಗಳನ್ನು ಸರಕಾರ ಗಮನಿಸಿಕೊಂಡಿದೆ, ಅವರ ಕಾರ್ಯಕ್ರಮವನ್ನು ಜಾಗ್ರತೆ ಕೈಗೊಳ್ಳಲು ಸರಕಾರವು ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಿದೆ ಎಂದು ಭರವಸೆಯನ್ನು ಕೊಡುತ್ತೇನೆ.

ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ವಸತಿ ಯೋಜನೆಗಳಿಗೆ ಪಡೆದ ಹಣ

೧೦೭೫. ಶ್ರೀ ಎಸ್. ಷಫಿ ಅಹ್ಮದ್ (ತುಮಕೂರು).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

೧. ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ವಸತಿ ಯೋಜನೆಗಳಿಗೆ ಪಡೆದಿರುವ ಹಣವೆಷ್ಟು ?

೨. ಒಟ್ಟು ಬಿಡುಗಡೆಯಾದ ಹಣದಲ್ಲಿ ಎಷ್ಟು ಯೋಜನೆಗಳನ್ನು ಕೈಗೊಂಡಿದ್ದೀರಿ ? ಅವುಗಳ ಪ್ರಗತಿಯು ಯಾವ ಹಂತದಲ್ಲಿದೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧. ಗೃಹ ಮಂಡಳಿಯ ವಸತಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ನೆರವು ಬರುವುದಿಲ್ಲ. ಆದಾಗ್ಯೂ ಮಂಡಳಿಯ ಯೋಜನೆಗಳಿಗೆ ಹಡ್ಕೋ ಸಂಸ್ಥೆಯಿಂದ ಕಳೆದ ೩ ವರ್ಷಗಳಲ್ಲಿ ಸುಮಾರು ೫೨.೫೦ ಕೋಟಿ ರೂ. ಗಳು ಹಾಗೂ ಹೆಚ್ ಡಿ ಎಫ್ ಸಿ ಯಿಂದ ೭.೫೦ ಕೋಟಿ ರೂ. ಗಳು ಸಾಲದ ರೂಪದಲ್ಲಿ ಮಂಜೂರಾತಿಯನ್ನು ಪಡೆದಿದೆ.